# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 795

ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಕೆ.ಎ ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)

ಉತ್ತರಿಸುವವರು : ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

ಉತ್ತರಿಸಬೇಕಾದ ದಿನಾಂಕ : 20.09.2022

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಿಂದ ಕೇಂದ್ರ ಸರ್ಕಾರದ ಉದ್ಯೋಗ ಆಧಾರ ಮೆಮೊರಾಂಡಮ್ ಪೋರ್ಟಲ್ ಅಡಿ ಮತ್ತು ರಾಜ್ಯದ ಉದ್ಯೋಗ ಮಿತ್ರ ಅಡಿಯಲ್ಲಿ ನೋಂದಣಿಯಾಗಿರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳೆಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | ಕೇಂದ್ರ ಸರ್ಕಾರವು ಉದ್ಯೋಗ ಆಧಾರ ಮೆಮೊರಾಂಡಮ್ ಪೋರ್ಟಲ್ ಅನ್ನು ದಿನಾಂಕ: 31/6/2020 ಕ್ಕೆ ರದ್ದುಗೊಳಿಸಿದ್ದು, ದಿನಾಂಕ: 1/7/2020 ರಿಂದ "Udyam Registration" ಎನ್ನುವ ಪೋರ್ಟಲ್ ಅನ್ನು ಜಾರಿಗೆ ತಂದಿರುತ್ತದೆ. ಈ ಪೋರ್ಟಲ್ ಜಾರಿಗೆ ಬಂದ ದಿನದಿಂದ 13/9/2022 ರವರೆಗೆ ಒಟ್ಟು 6,26,574 ಉದ್ಯಮಗಳು ನೋಂದಣಿಯಾಗಿದ್ದು, ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ) | ರಾಜ್ಯದಲ್ಲಿ ಈ ರೀತಿ ನೋಂದಣಿಯಾದ ಎಷ್ಟು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಕಾರ್ಯನಿರತವಾಗಿವೆ ಮತ್ತು ಈ ಬಗ್ಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಮೀಕ್ಷೆ ಕೈಗೊಂಡಿವೆಯೇ; (ಹಾಗಿದ್ದಲ್ಲಿ, ಈ ಸಮೀಕ್ಷೆಯ ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ಯಾವುದೇ ಸಮೀಕ್ಷೆ ನಡೆಸದೇ ಇರುವ ಹಿನ್ನೆಲೆಯಲ್ಲಿ ಪ್ರಸ್ತುತ ಆಯವ್ಯಯದಲ್ಲಿ ರೂ.3,37,51,068/- (Incl. Taxes) + 57,20,520/- (Maintenance cost for 1 year) ವೆಚ್ಚದಲ್ಲಿ ಸ್ಮಾರ್ಟ್ ಗವರ್ನೆನ್ಸ್ ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆಸ್ಸ್ ಸಂಸ್ಥೆ ಮೂಲಕ ಕಾರ್ಯನಿರತ ಘಟಕಗಳ ಆನ್ ಲೈನ್ ವ್ಯವಸ್ಥೆ ರೂಪಿಸಲು ಕಾರ್ಯಾದೇಶ ನೀಡಲಾಗಿದ್ದು, ಕಾರ್ಯ ಪ್ರಗತಿಯಲ್ಲಿದೆ. |
| ಇ) | ರಾಜ್ಯದಲ್ಲಿ ಜಿಎಸ್‌ಟಿ ವ್ಯವಸ್ಥೆಯನ್ನು ಜಾರಿಗೆ ತದನಂತರ ಸಾವಿರಾರು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಮುಚ್ಚಿ ಹೋಗಿರುವುದು ನಿಜವೇ; ಈ ಸಮಸ್ಯೆಯನ್ನು ಬಗೆಹರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಉದ್ಯಮಗಳ ನೆರವಿಗಾಗಿ ಹೊರ ತಂದಿರುವ ಯೋಜನೆ ಮತ್ತು | ರಾಜ್ಯದಲ್ಲಿ ಜಿಎಸ್‌ಟಿ ವ್ಯವಸ್ಥೆಯನ್ನು ಜಾರಿಗೆ ತಂದ ನಂತರ ಸಾವಿರಾರು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಮುಚ್ಚಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.<br><br>ಆದರೆ, ಎಂ.ಎಸ್.ಎಂ.ಇ ಗಳು ಕೋವಿಡ್ ಬಿಕ್ಕಟ್ಟಿನಿಂದಾಗಿ ಮತ್ತು ಇತರೆ ಹಲವು ಕಾರಣಗಳಿಂದ ಸಂಕಷ್ಟದಲ್ಲಿದ್ದು, ಇವುಗಳ ಪುನಶ್ಚೇತನಕ್ಕಾಗಿ ಕೆಳಕಂಡ ಕಾರ್ಯಕ್ರಮ |

| | | |
|---|---|---|
| | ವ್ಯವಸ್ಥೆಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು) | ಹಮ್ಮಿಕೊಳ್ಳಲಾಗಿರುತ್ತದೆ:<br><br>1. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ನೀತಿ:<br><br>ಸಾಲ ಪಡೆದು ಒತ್ತಡದಲ್ಲಿರುವ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳ ಪುನ:ಶ್ಚೇತನಕ್ಕಾಗಿ ಆರ್‌ಬಿಐ ರವರು ಸಂಖ್ಯೆ ಆರ್‌ಬಿಐ/2018-19/203 ದಿನಾಂಕ 07/06/2019 ರಂದು ಬ್ಯಾಂಕುಗಳಿಗೆ ಸುತ್ತೋಲೆ ನೀಡಿದ್ದು ಅದರಂತೆ ಬ್ಯಾಂಕುಗಳು ಕಾರ್ಯ ನಿರ್ವಹಿಸುತ್ತಿವೆ.<br><br>ರೋಗಗ್ರಸ್ಥ ಘಟಕಗಳ ಪುನ:ಶ್ಚೇತನಕ್ಕಾಗಿ ಬ್ಯಾಂಕುಗಳು ಕೆಳಕಂಡ ಸವಲತ್ತುಗಳನ್ನು ನೀಡುತ್ತಿವೆ:<br><br>1. ಪಡೆದ ಸಾಲದ ಕಂತುಗಳನ್ನು ರೀ ಷೆಡ್ಯೂಲ್ ಮಾಡುವುದು,<br>2.ಅಗತ್ಯಕ್ಕೆ ಬೇಕಾಗಿರುವ ಹೆಚ್ಚುವರಿ ದುಡಿಮೆ ಬಂಡವಾಳ/ಅವಧಿ ಸಾಲ ನೀಡುವುದು.<br><br>ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆ ಅಡಿಯಲ್ಲಿ ಇವುಗಳನ್ನು ಪುನಃಶ್ಚೇತನಗೊಳಿಸಲು ಹಮ್ಮಿಕೊಂಡಿರುವ ಯೋಜನೆಗಳು ಈ ಕೆಳಗಿನಂತಿವೆ.<br><br>ಕೇಂದ್ರ ಸರ್ಕಾರದ ಯೋಜನೆ:<br><br>ಕೇಂದ್ರ ಸರ್ಕಾರ ಘೋಷಿಸಿರುವ "ಆತ್ಮ ನಿರ್ಭರ ಭಾರತ ಅಭಿಯಾನ" ದ ಅಡಿಯಲ್ಲಿ ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲು ಮತ್ತು ಉದ್ಯಮಗಳಿಗೆ ಆರ್ಥಿಕ ನೆರವು ನೀಡುವ ಯೋಜನೆಯಲ್ಲಿ ಈ ಕೆಳಗಿನ ನೆರವು ದೊರೆತಿದೆ.<br><br>ಭಾರತ ಸರ್ಕಾರವು "ಇ.ಸಿ.ಎಲ್.ಜಿ"-ಎಮರ್ಜೆನ್ಸಿ ಕ್ರೆಡಿಟ್ ಲೈನ್ ಗ್ಯಾರಂಟಿ ಯೋಜನೆಯನ್ನು ಜಾರಿಗೆ ತಂದಿದ್ದು ಇದರನ್ವಯ ಫೆಬ್ರವರಿ 2020 ರಅಂತ್ಯಕ್ಕೆ ಬ್ಯಾಂಕ್‌ಗಳಲ್ಲಿ ಬಾಕಿ ಇರುವ ಎಂ.ಎಸ್.ಎಂ.ಇ ಘಟಕಗಳ ಸಾಲದ ಮೊತ್ತಕ್ಕೆ ಶೇ 20% ರಷ್ಟು ಹೆಚ್ಚುವರಿ ಸಾಲವನ್ನು ಯಾವುದೇ ಹೆಚ್ಚುವರಿ ಖಾತರಿ ಇಲ್ಲದೇ ನೀಡುವ ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಇದರಡಿಯಲ್ಲಿಇದುವರೆಗೆ ಬ್ಯಾಂಕ್‌ಗಳು ನೀಡಿರುವ ಸಾಲದ ವಿವರಗಳು ಈ ಕೆಳಗಿನಂತಿವೆ: |

| | ಒಟ್ಟು ಘಟಕಗಳು | ಒಟ್ಟು ಸಾಲದ ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| ಸಾಲ ಮಂಜೂರಾತಿ | 1,69,280 | 5,73,805.15 |
| ಸಾಲ ಬಿಡುಗಡೆ | 1,48,662 | 4,90,049.41 |

**ರಾಜ್ಯ ಸರ್ಕಾರದ ಯೋಜನೆ:**

ಕೊರೋನದಿಂದ ಅತಂತ್ರವಾಗಿರುವ ಸಣ್ಣ ಕೈಗಾರಿಕೆಗಳಿಗೆ ರಾಜ್ಯ ಸರ್ಕಾರದಿಂದ ಈ ಕೆಳಗಿನ ಯೋಜನೆ ರೂಪಿಸಲಾಗಿರುತ್ತದೆ.

1. ಇಂಧನ ಇಲಾಖೆಯು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಎಪ್ರಿಲ್ ಮತ್ತು ಮೇ 2020 ತಿಂಗಳ ಬೇಡಿಕೆ ಶುಲ್ಕ ಮತ್ತು ಸ್ಥಿರ ಶುಲ್ಕವನ್ನು ಮನ್ನಾ ಮಾಡಿರುತ್ತದೆ.
2. ಇಂಧನ ಇಲಾಖೆಯು ವಿದ್ಯುತ್ ಬಿಲ್‌ನ್ನು ಪ್ರಾಮಾಣಿಕವಾಗಿ ನಿಗದಿತ ಅವಧಿಯೊಳಗೆ ಪಾವತಿಸುವ ಕೈಗಾರಿಕೆಗಳಿಗೆ ರಿಯಾಯಿತಿಯನ್ನು ನೀಡಿರುತ್ತದೆ. ಹೆಚ್‌ಟಿ ಗರಿಷ್ಟ ಮಿತಿ ರೂ.1 ಲಕ್ಷ, ಎಲ್‌ಟಿ ಗರಿಷ್ಟ ಮಿತಿ ರೂ.10,000/-

| | |
|---|---|
| 1 ರಿಂದ 5 ದಿನದೊಳಗೆ ಪಾವತಿಸಿದಲ್ಲಿ | ಶೇ 1% ರಿಯಾಯಿತಿ |
| 6 ರಿಂದ 15 ದಿನದೊಳಗೆ ಪಾವತಿಸಿದಲ್ಲಿ | ಶೇ 0.5% ರಿಯಾಯಿತಿ |
| 15 ರಿಂದ 30 ದಿನದೊಳಗೆ ಪಾವತಿಸಿದಲ್ಲಿ | ಯಾವುದೇ ರಿಯಾಯಿತಿ ಇರುವುದಿಲ್ಲ |

3. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು ಮಾರ್ಚ್, ಏಪ್ರಿಲ್ ಮತ್ತು ಮೇ 2020 ತಿಂಗಳಲ್ಲಿ ಪಾವತಿಸದಿದ್ದಲ್ಲಿ ಆ ಪಾವತಿಯನ್ನು ಕ್ರಮವಾಗಿ 3 ತಿಂಗಳು ಮುಂದೂಡಲಾಗಿದೆ ಮತ್ತು ಈ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ವಿಧಿಸುವುದಿಲ್ಲ.

<table>
<tr>
<td></td>
<td></td>
<td>4. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು, ಮಳಿಗೆಗಳ ಬಾಡಿಗೆ ಮತ್ತು ನೀರಿನ ಶುಲ್ಕಗಳ ಏಪ್ರಿಲ್ ಮತ್ತು ಮೇ 2020 ತಿಂಗಳುಗಳ ಕಂತನ್ನು ಈ ಕೆಳಗಿನಂತೆ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ಯಾವುದೇ ಬಡ್ಡಿಯನ್ನು ವಿಧಿಸಲಾಗುವುದಿಲ್ಲ.
<table>
<tr><td>ಏಪ್ರಿಲ್ 2020 ತಿಂಗಳ ಕಂತು</td><td>ಜೂನ್ 2020 ತಿಂಗಳ ಕಂತಿನಜೊತೆ ಪಾವತಿಸತಕ್ಕದ್ದು</td></tr>
<tr><td>ಮೇ 2020 ತಿಂಗಳ ಕಂತು</td><td>ಜುಲೈ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು</td></tr>
<tr><td>ಜೂನ್ 2020 ತಿಂಗಳ ಕಂತು</td><td>ಆಗಸ್ಟ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು</td></tr>
</table>
ಕೊರೋನಾ 2ನೇ ಅಲೆಯ ನಂತರ ರಾಜ್ಯ ಸರ್ಕಾರದ ಇಂಧನ ಇಲಾಖೆಯು ದಿನಾಂಕ 21.06.2021 ರ ಆದೇಶದಂತೆ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಪಾವತಿಸಬೇಕಾದ ಮೇ ಮತ್ತು ಜೂನ್ 2021 ತಿಂಗಳ ಬೇಡಿಕೆ/ ನಿಗದಿತ ಶುಲ್ಕವನ್ನು ಮನ್ನಾ ಮಾಡಿರುತ್ತದೆ.</td>
</tr>
<tr>
<td>ಈ)</td>
<td>ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಮಂತ್ರಾಲಯದ ರೀತಿ ಮತ್ತು ಏಕ ರೂಪತೆಗೆ ರಾಜ್ಯದಲ್ಲಿನ ಸಣ್ಣ ಪ್ರಮಾಣದ ಕೈಗಾರಿಕೆ ಇಲಾಖೆಯ ಹೆಸರನ್ನು ಮರು ನಾಮಕರಣ ಮಾಡಿರುವುದಿಲ್ಲ? (ವಿವರಗಳನ್ನು ಒದಗಿಸುವುದು)</td>
<td>ಸದರಿ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.</td>
</tr>
</table>

ಸಿಐ 149 ಎಸ್‌ಎಸ್ ಐ 2022

(ಎನ್.ನಾಗರಾಜು (ಎಂ.ಟಿ.ಬಿ))

ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

ಶ್ರೀ ಕೆ.ಎ.ತಿಪ್ಪೇಸ್ವಾಮಿ( ನಾಮ ನಿರ್ದೇಶನ ಹೊಂದಿದವರು)ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ789 (795) ಗೆ ಅನುಬಂಧ-1

ದಿನಾಂಕ 1/7/2020 ರಿಂದ 13/9/2022 ರ ವರೆಗೆ "udyam registration" ಪೋರ್ಟಲ್ ನಲ್ಲಿ ನೋಂದಣಿಯಾಗಿರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಜಿಲ್ಲಾವಾರು ಸಂಖ್ಯೆ

| # | District Name | Micro | Small | Medium | Total |
|---|---|---|---|---|---|
| 1 | BAGALKOT | 13,964 | 287 | 16 | **14,267** |
| 2 | BALLARI | 15,893 | 858 | 84 | **16,835** |
| 3 | BELAGAVI | 44,189 | 958 | 68 | **45,215** |
| 4 | BENGALURU (RURAL) | 32,853 | 1,291 | 141 | **34,285** |
| 5 | BENGALURU (URBAN) | 1,81,107 | 11,074 | 1,319 | **1,93,500** |
| 6 | BIDAR | 9,357 | 248 | 16 | **9,621** |
| 7 | CHAMARAJNAGAR | 4,807 | 156 | 1 | **4,964** |
| 8 | CHIKBALLAPUR | 7,975 | 235 | 12 | **8,222** |
| 9 | CHIKKAMAGALURU | 8,162 | 278 | 19 | **8,459** |
| 10 | CHITRADURGA | 8,417 | 305 | 19 | **8,741** |
| 11 | DAKSHIN KANNAD | 26,153 | 1,024 | 89 | **27,266** |
| 12 | DAVANGERE | 12,381 | 452 | 23 | **12,856** |
| 13 | DHARWAD | 26,884 | 885 | 88 | **27,857** |
| 14 | GADAG | 7,276 | 213 | 4 | **7,493** |
| 15 | HASSAN | 13,682 | 504 | 18 | **14,204** |
| 16 | HAVERI | 9,547 | 332 | 13 | **9,892** |
| 17 | KALABURAGI | 11,288 | 555 | 34 | **11,877** |
| 18 | KODAGU | 4,899 | 155 | 14 | **5,068** |
| 19 | KOLAR | 9,241 | 399 | 26 | **9,666** |
| 20 | KOPPAL | 6,849 | 392 | 19 | **7,260** |
| 21 | MANDYA | 11,417 | 348 | 7 | **11,772** |
| 22 | MYSURU | 30,065 | 1,079 | 85 | **31,229** |
| 23 | RAICHUR | 9,888 | 664 | 49 | **10,601** |
| 24 | RAMANAGARA | 8,068 | 288 | 19 | **8,375** |
| 25 | SHIVAMOGGA | 15,814 | 528 | 32 | **16,374** |
| 26 | TUMAKURU | 18,420 | 712 | 50 | **19,182** |
| 27 | UDUPI | 14,296 | 581 | 44 | **14,921** |
| 28 | UTTAR KANNAD | 12,392 | 255 | 8 | **12,655** |
| 29 | VIJAYANAGAR | 1,210 | 55 | - | **1,265** |
| 30 | VIJAYAPURA | 15,124 | 456 | 34 | **15,614** |
| 31 | YADGIR | 6,844 | 185 | 9 | **7,038** |
| | **Total :** | **5,98,462** | **25,752** | **2,360** | **6,26,574** |